# ಉಳಿದವರು ಕಂಡಂತೆ



**ಸರ್ಕಾರಿ ಶಾಲೇಲಿ ಓದಿದ ಮಗಳು ಚಾನಲ್ಲಿನಲ್ಲಿ ವಾರ್ತಾವಾಚಕಿಯಾದ ವಿಷಯ ಊರಲ್ಲೆಲ್ಲಾ ಹಬ್ಬಿತು. ಹೋದವರು ಬಂದವರ ಹತ್ರ, ಫೋನ್‌ನಲ್ಲಿ, ಎಲ್ಲೆಲ್ಲೂ ಇದೇ ಸುದ್ದಿ. ಈ ಸುದ್ದಿಯ ಸುತ್ತಲ ಆಗುಹೋಗುಗಳನ್ನು ಚಾಮರಾಜನಗರದ ಸುಂದರ ಭಾಷೆಯಲ್ಲಿ, 'ಚೆನ್ನುಡಿ' ಮೂಲಕ ತೆರೆದಿಟ್ಟಿದ್ದಾರೆ ಲೇಖಕಿ**

**ಕುಸುಮಾ ಆಯರಹಳ್ಳಿ**

ಇನ್ನೂ ಡಿಗ್ರಿ ಮುಗಿಸಿರದ ನಮ್ ತಂಗಮ್ಮನೋರು ನ್ಯೂಸ್ ಚಾನಲ್ಲಿನ ಆಂಕರಿಂಗ್ ಟೆಸ್ಟಿಗ್ ಅರ್ಜಿ ಆಕಿದವರೂ ಪಾಸೂ ಆಗ್ಬುಟ್ರು. ಕೆಲ್ಸಾನೂ ತಕಂಡೇ ಬಂದ್ಬುಟ್ರು. ನಮ್ಮಪ್ಪ ಸಣ್ಣ ಪುಟ್ಟ ವಿಷಯಾನೇ ಬಿಡಾ ಮನ್ಸ ಅಲ್ಲ, ಇನ್ನು ಗವರ್ಮೆಂಟ್ ಇಸ್ಕೂಲಲ್ ಓದಿದ್ ತನ್ ಮಗಳು ನ್ಯೂಸ್ ಚಾನೆಲ್ಲಿನಲ್ಲಿ ವಾರ್ತಾವಾಚಕಿಯಾಗಿದಾಳೆ ಅನ್ನಾ ಸುದ್ದಿನ ಬಿಡೋದುಂಟಾ? ತಾನೇ ಒಂದ್ ಲೋಕಲ್ ಚಾನಲ್ಲಿನ ಥರವಾಗ್ ಕೆಲ್ಸ ಸುರು ಮಾಡ್ಕಂಬುಟ್ರು, ಊರಿಕೇರಿ ನೆಂಟ್ರು, ಎತ್ರು ಒಬ್ಬನ್ನೂ ಬುಡದೇ ಸಾರ್ಕಂಡ್ ಬಂದಿದ್ದಾಯ್ತು. ಅಷ್ಟ್ ಸಾಲದು ಅಂತ ಫೂನ್ ಬೇರೆ, ನ್ಯೂಸು ಸುರು ಆಗೋ ಅರ್ಧ ಗಂಟೆಗ್ ಮುಂಚೆ ಕೈಲಿ ಫೋನಂಬೋ ಫೋನ್ ಹಿಡ್ಕಂಡ್ ಕೂತ್ಕಂಡ್ರ ಮುಗದೇ ಓಯ್ತ್ ... 'ಈಗ್ ಬತ್ತಳ ನೋಡಿ ನನ್ ಮಗಳು' ಅಂತ ಚಾನೆಲ್ಲು ಎಸ್ರು, ಟೇಮು ಎಲ್ಲನು ದಿನಕ್ ಐವತ್ ಜನಕ್ ಮುಟ್ಟಿಸ್ತಿದ್ರು.

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ನಮ್ಮೂರ ಗೌರ್ಮೆಂಟು ಇಸ್ಕೂಲಿಗೂ ಒಂಥರದ್ ಗರಿ ಬಂದ್ಬುಡ್ತು. ಐಕಳ್ ಮುಂದ್ ನಿಂತ್ಕಂಡ್ ಪಾಠ ಮಾಡಾ ಮೇಡಮ್ಮದೀರೆಲ್ಲ. 'ನೋಡಿ ಮಕ್ಕಳೇ, ನಮ್ಮಶಾಲೇಲಿ ಓದಿದ್ ಸ್ಟೂಡೆಂಟು ಇವತ್ತು ಸ್ಯಾಟಲೈಟ್ ಚಾನಲ್ಲಲ್ಲಿ ನ್ಯೂಸ್ ಓದ್ತಾರೆ, ಇದು ನಮಗೆ ಹೆಮ್ಮೆ ವಿಷಯ' ಅಂತ ಹೇಳೋದು ಮರೀತಿರ್ಲಿಲ್ಲ.

ಇನ್ನು ಊರ ವಿದ್ಯಾವಂತರು, ಪುಡಿ ರಾಜಕಾರಣಿಗಳಿಗೂ ಏನೋ ಒಂಥರವಾದ್ ಕುಸಿ. ನಾಕೈದು ದಿನ ಟಿವಿಲಿ ಜನ ನೋಡಿದ್ ಮೇಲಂತು, ನೋಡಿ ಅಂತ ಟೇಮಿಂಗ್ಸ್ ಏಳ್ತಿದ್ ನಮ್ಮಪ್ಪ, ನೋಡುದ್ರಾ? ಅಂತ ಕೇಳಾಕ್ ಸುರು ಮಾಡಿದ್ರು. ಅಥವಾ ಕೇಳಾಕ್ ಮುಂಚೆ ಜನ ಯೋಳಾಕ್ ಸುರು ಮಾಡುದ್ರು. ಹಾಲಿನ್ ಡೈರಿ, ಓಟ್ಲು, ಮಠ, ಎಲ್ಲೋದ್ರೂ ಇದೇ ಮಾತು. 'ಯಾನ ಪುಟ್ಟಣ್ಣ ಉಡುಗಾಟದ್ ಕೆಲ್ಸವಾ ಇದು? ಎಷ್ಟ್ ಕೋಟಿ ಜನವಿದ್ದದು ದೇಸ್ದಲಿ, ಎಂತೆಂತ ಸಿಟಿಲ್ ಬೆಳ್ತಿರಾ ಐಕಿದ್ದವ್... ಎಲ್ಲನ್ನೂ ಬುಟ್ಬುಟ್ಟು ಈ ಕೆಲ್ಸವ ನಿನ್ ಮಗಳ್ಗೇ ಕೊಡಬೇಕು ಅಂದ್ರ, ಏನ್ ತಮಾಸಿ ಮಾತಾ ಇದು?' ಅಂತೊಬ್ಬ. 'ನೋಡ್ಕಳ್ದಿಯೇ ಅಷ್ಟುನೂವ ತಲಲ್ ಮಡಿಕಂಡು ಒಂದೇ ಉಸುರುಗ್ ಯೋಳ್ತಳಲ್ಲ ಅದ್ ಯೋಳಿ ಪಸ್ಟು' (ಮುಂದೆ ಟಿಪಿ ಓಡೋದು ಅವರಿಗ್ ಗೊತ್ತಿಲ್ಲ ಪಾಪ) ಅಂತೊಬ್ಬ. 'ಯಾನ ಬುಡಪ್ಪ ಮಗಳ ಟೀವಿಲ್ ನೋಡ್ಕಳಂಗಾದ,' 'ದಿನೆಚ್ಚುಕಮ್ಮಿ